**OS. No.188/2023** **PW – 1**

**ಪ್ರಮಾಣೀಕರಿಸಲಾದ ದಿನಾಂಕ : 12.11.2025.**

**<u>ವಾಟೀ ಸವಾಲು : ಪ್ರತಿವಾದಿ ಪರ ಶ್ರೀ. B.N.A ವಕೀಲರಿಂದ</u> :-**

ನನ್ನ ಹಾಗೂ 2ನೇ ಪ್ರತಿವಾದಿಯದ್ದು ಪ್ರೇಮ ವಿವಾಹ ಎಂದರೆ ಸರಿ. ನಾವಿಬ್ಬರೂ ಪರಸ್ಪರ ಒಪ್ಪಿ ನಮ್ಮ ಕುಟುಂಬಸ್ಥರನ್ನು ಒಪ್ಪಿಸಿದ ಬಳಿಕ ಮದುವೆಯಾಗಿರುತ್ತೇವೆ ಎಂದರೆ ಸರಿ. ನಾನು ಈ ದಾವೆಯನ್ನು ನನ್ನ ಮಗಳಿಗೆ ಆಸ್ತಿ ಬೇಕು ಎಂಬ ಕಾರಣಕ್ಕೆ ಹೂಡಿರುತ್ತೇನೆ. ನಿಪಿ-1 ರಂತೆ ವಂಶವೃಕ್ಷವನ್ನು ನಾನೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. 1ನೇ ಪ್ರತಿವಾದಿಗೆ ಸಹೋದರ ಸಹೋದರಿಯರು ಇದ್ದಾರೆ ಎಂದರೆ ಸರಿ, ಅದು ನಿಪಿ-1 ರಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ವಿಭಾಗಕ್ಕೆ ದಾವೆಯನ್ನು ಹೂಡುವ ಸಮಯದಲ್ಲಿ ಅದರ ಹಕ್ಕುದಾರರೆಲ್ಲರನ್ನೂ ಪಕ್ಷಗಾರರನ್ನಾಗಿ ಸೇರಿಸಬೇಕು ಎಂಬ ವಿಷಯ ನನಗೆ ತಿಳಿದಿದೆ ಎಂದರೆ ತಿಳಿದಿದೆ. ನಿಪಿ-2 ರಂತೆ ಪಹಣಿಯನ್ನು ಹಾಜರುಪಡಿಸಿದ್ದು ಅದು 1ನೇ ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದಿರತಕ್ಕಂತಹ ಆಸ್ತಿಯಾಗಿರುತ್ತದೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ವಾದಪತ್ರವನ್ನು ನಾನೇ ವಕೀಲರ ಕಡೆ ಮಾಹಿತಿಯನ್ನು ನೀಡಿ ಹೂಡಿರುತ್ತೇನೆ ಎಂದರೆ ಸರಿ. ಸದರಿ ನಿಪಿ-1 ರಲ್ಲಿ ಇರುವ ಪಕ್ಷಗಾರರನ್ನು ಈ ದಾವೆಯಲ್ಲಿ

ಸೇರಿಸಿರುವುದಿಲ್ಲ ಎಂದರೆ ಸರಿ. ನಾನು ಈ ದಾವೆಯನ್ನು ಹೂಡುವ ಸಮಯದಲ್ಲಿ ನನ್ನ ವಕೀಲರು ನಿಪಿ-1 ರಲ್ಲಿರುವ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡಬೇಕು ಎಂದು ನನ್ನ ಗಮನಕ್ಕೆ ತಂದಿರುವುದಿಲ್ಲ. ನಾನು ತಿಪಟೂರಿನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ M.C.No.130/2022 ರಂತೆ ಒಂದು ಡಿವೋರ್ಸ್ ಅರ್ಜಿಯನ್ನು ಹಾಕಿರುತ್ತೇನೆ ಎಂದರೆ ಸರಿ. ಅದೇ ರೀತಿ Crl.Misc.86/2023 ರಂತೆ ಜೀವನಾಂಶ ಕೋರಿ ಒಂದು ಅರ್ಜಿಯನ್ನು ಹೂಡಿದ್ದು ಅದು ಇನ್ನೂ ಬಾಕಿ ಇದೆ ಎಂದರೆ ಸರಿ. ಈ ದಾವೆ ಹೂಡಿರುವ 1-2 ವರ್ಷಗಳ ಹಿಂದೆ 2ನೇ ಪ್ರತಿವಾದಿಯವರ ಆರೋಗ್ಯ ಸ್ಥಿತಿ ಸರಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾನು ದಾವೆಯನ್ನು ಹೂಡುವ ಸಮಯದಲ್ಲಿ 2ನೇ ಪ್ರತಿವಾದಿ ನನ್ನೊಂದಿಗೆ ವಾಸವಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿಯು ಹೇಳುವ ಹಾಗೇ 2ನೇ ಪ್ರತಿವಾದಿಯೇ ಈ ದಾವೆಯನ್ನು ಅವರ ಕಡೆಯಿಂದ ಹಾಕಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ದಾವೆಯನ್ನು ಹೂಡಿದ ಬಳಿಕ ಅವರ ಆರೋಗ್ಯ ಸ್ಥಿತಿ ಮುಂಚಿಗಿಂತಲೂ ಹದಗೆಟ್ಟಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯ ಆರೋಗ್ಯ ಸ್ಥಿತಿಯು ಸರಿ ಇಲ್ಲದ ಕಾರಣ 1ನೇ ಪ್ರತಿವಾದಿ ಹಾಗೂ ಆತನ ಪತ್ನಿಯು ಅವರನ್ನು ನೋಡಿಕೊಳ್ಳಲು ಆಗದ ಕಾರಣ ನೀವೇ 2ನೇ ಪ್ರತಿವಾದಿಯನ್ನು ಬಿಟ್ಟು ಹೋಗಿರುತ್ತೀರಿ ಎಂದರೆ ಸರಿಯಲ್ಲ. ನಾನು ಒಂದು ಗ್ರಾಮದಲ್ಲಿ ಬ್ಯೂಟಿಪಾರ್ಲರ್ ನ್ನು ನಡೆಸುತ್ತಿದ್ದೇನೆ ಎಂದರೆ ಸರಿ. ಪ್ರತಿವಾದಿಯರು ವಾದಿ ಹಾಗೂ ಆಕೆಯ ಮಗಳಿಗೆ ಬರಬೇಕಾಗಿದ ಪಾಲನ್ನು ಕಾನೂನಿನ ರೀತಿಯಲ್ಲಿ ಕೊಡಲು ಸಿದ್ಧರಾಗಿದ್ದರು, ವಾದಿಯು ಒಪ್ಪಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಸದರಿ ಪಾಲನ್ನು ಪಡೆಯಲು ಸಿದ್ಧಳಿರುತ್ತೇನೆ ಎಂದು ನುಡಿಯುತ್ತಾರೆ.

**ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**
**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**